2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

**ಸಿ.ಸಿ.ನಂ. 4/2019**

ದಿನಾಂಕಃ **28.10.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಪ್ರಸನ್ನ | ಚಾಸಾ-20, ಪ್ರಾಸ.-4 |
| ತಂದೆಯ ಹೆಸರುಃ | ರಂಗಪ್ಪ | |
| ವಯಸ್ಸು ಃ | 45 ವರ್ಷ | |
| ಉದ್ಯೋಗ ಃ | ವ್ಯವಸಾಯ | |
| ವಾಸ ಃ | ಬೆಲಗೂರು | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಆರೋಪಿ ನನಗೆ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅಪಘಾತದಿಂದ ನನಗೆ ಯಾವುದೇ ಗಾಯವಾಗಿರುವುದಿಲ್ಲ. ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ

ದಿಃ 16.01.2018 ರಂದು ವಕ್ಕಲಗೆರೆಯ ನಮ್ಮ ಸಂಬಂಧಿಕರ ಮನೆಯ ದೇವರ ಹರಕೆ ಕಾರ್ಯಕ್ರಮ ಮುಗಿಸಿ ರಾತ್ರಿ 9.30 ಗಂಟೆಗೆ ವಾಪಸ್ಸು ನನ್ನ ಊರಿಗೆ ನನ್ನ ದೊಡ್ಡಪ್ಪನ ಮಗ ಚಾಸಾ-1 ಮತ್ತು ಸಂಬಂಧಿಕರಾದ ರವಿ, ಮಂಜುನಾಥ ರವರೊಂದಿಗೆ ಮಂಜುನಾಥ ರವರ ಬಾಬ್ತು ಬೈಕ್ ನಂ ಕೆಎ-19 ಇಜಿ-1147 ಬೈಕಿನಲ್ಲಿ 4 ಜನರು ಹೊರಟೆವು ಎಂದರೆ ಸರಿಯಲ್ಲ. ಸದರಿ ಬೈಕನ್ನು ರವಿ ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ವಕ್ಕಲಗೆರೆ ಬಿಟ್ಟು ಎಂ ಕೋಡಿಹಳ್ಳಿ ಕಡೆಯಿಂದ ಚಿನಕರಹಳ್ಳಿ ನಡುವೆ ಹಾದು ಹೋಗಿರುವ ರಸ್ತೆಯಲ್ಲಿ ವಾಟರ್ ಟ್ಯಾಂಕ್ ಹತ್ತಿರ ರಸ್ತೆ ಎಡಬದಿಯಲ್ಲಿ ಹೋಗುತ್ತಿರುವಾಗ ರಾತ್ರಿ 9.45 ಗಂಟೆಗೆ ಎದುರುಗಡೆಯಿಂದ ಒಂದು ಪಿಕಪ್ ವಾಹನದ ಚಾಲಕನು ಅತೀವೇಗವಾಗಿ ಚಾಲನೆ ಮಾಡಿಕೊಂಡು ಬಂದು ನಾವು ಪ್ರಯಾಣಿಸುತ್ತಿದ್ದ ಬೈಕಿಗೆ ಡಿಕ್ಕಿಪಡಿಸದ ಪರಿಣಾಮ ನೆಲಕ್ಕೆ ಬಿದ್ದ ನನ್ನ ಬಲ ಕೈ, ಬಲಗಾಲಿಗೆ ತೀವ್ರ ಗಾಯವಾಯಿತು ಎಂದರೆ ಸರಿಯಲ್ಲ. ಚಾಸಾ-1 ರವರ ಬಲಕಾಲು, ತಲೆಗೆ ತೀವ್ರ ಗಾಯವಾಯಿತು ಎಂದರೆ ಸರಿಯಲ್ಲ. ಮಂಜುನಾಥನಿಗೆ ತಲೆಗೆ, ಬಲಕ್ಕೈಗೆ ತೀವ್ರ ಗಾಯವಾಯಿತು ಎಂದರೆ ಸರಿಯಲ್ಲ. ಬೈಕ್ ಚಲಾಯಿಸುತ್ತಿದ್ದ ರವಿ ಅವರ ಬಲಭಾಗದ ಮುಖ, ಎಡಬದಿಯ ಕಿವಿಯ ಹತ್ತಿರ, ಕುತ್ತಿಗೆ, ಎಡಕೈ ಬುಜ ಕ್ಕೆ ತೀವ್ರಗಾಯವಾಗಿ ರಸ್ತೆಯಲ್ಲೇ ಮೃತಪಟ್ಟನು ಎಂದರೆ ಸರಿಯಲ್ಲ. ಪರಿಣಾಮವಾಗಿ ಪಿಕಪ್ ವಾಹನವು 25 ಮೀಟರ್ ದೂರಕ್ಕೆ ಹೋಗಿ ರಸ್ತೆಯ ಬಲಬದಿ ಚರಂಡಿಗೆ ಮಕಾಡೆ ಬಿದ್ದಿತ್ತು ಎಂದರೆ ಸರಿಯಲ್ಲ. ನಮ್ಮನ್ನು ಇನ್ನೊಂದು ವಾಹನದಲ್ಲಿ ಬರುತ್ತಿದ್ದ ಸಂಬಂಧಿಕರು ಉಪಚರಿಸಿ ಬೆಲಗೂರು ಆಸ್ಪತ್ರೆಗೆ ಚಿಕಿತ್ಸೆಗಾಗಿ

ಕರೆದುಕೊಂಡು ಹೋಗುತ್ತಿರುವಾಗ ಮಂಜುನಾಥ ರವರು ರಸ್ತೆ ಮಧ್ಯದಲ್ಲಿ ಮೃತಪಟ್ಟನು ಎಂದರೆ ಸರಿಯಲ್ಲ. ನಾನು ಚಿತ್ರದುರ್ಗದ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈಗ ಓದಿ ಹೇಳಿದಂತೆ ನಾನು ಪೋಲಿಸರಿಗೆ ದಿಃ 02.02.2018 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆ ಭಾಗವನ್ನು ನಿಪಿ-7 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.